ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

RID No:1000193025

DKC:27011/193/2019

ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು, ದಿನಾಂಕ:21.08.2019.

## ಕಚೇರಿ ಆದೇಶ

ವಿಷಯ: 2019-20ನೇ ಸಾಲಿಗೆ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಜಿಲ್ಲಾವಾರು ಕಲಾವಿದರ ಸಮೀಕ್ಷೆಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 80 ಕಸಧ 2019, ದಿನಾಂಕ:24.07.2019.
2.ಸರ್ಕಾರದ ಆದೇಶ ಸಂಖ್ಯೆ: ಕಸಂವಾ 112 ಕಸನಿ 2009, ಬೆಂಗಳೂರು. ದಿ:23.01.2012.

----

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ 2019-20ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ, ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳಲ್ಲಿರುವ ಜಾನಪದ ಕಲೆ (ಸೋಬಾನೆ, ಕಂಸಾಳೆ, ಗೀ.ಗೀ ಪದ, ತಮಟೆ, ಜಗ್ಗಲಿಗೆ, ನಗಾರಿ, ಜಾನಪದ ಗೀತೆಗಳು, ನೃತ್ಯ ಮುಂತಾದವು) ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ, ಗಮಕ, ಹರಿಕಥೆ, ಕರ್ನಾಟಕ ಸಂಗೀತ, ನೃತ್ಯ (ಭರತನಾಟ್ಯ, ಕೂಚುಪುಡಿ, ಕಥಕ್) ಚಿತ್ರಕಲೆ, ಶಿಲ್ಪಕಲೆ, ಯಕ್ಷಗಾನ, ಬಯಲಾಟ ಮತ್ತು ನಾಟಕ ಕ್ಷೇತ್ರಗಳಲ್ಲಿರುವ ಕಲಾವಿದರ ಸಮೀಕ್ಷೆಯನ್ನು ಮಾಡಲು ಅನುದಾನದ ಅವಕಾಶಮಾಡಿಕೊಳ್ಳಲಾಗಿದೆ. ಈ ಕಾರ್ಯವನ್ನು ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ಇವರಿಂದ ನಿರ್ವಹಿಸಲು ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ. ಈ ಸಮೀಕ್ಷೆಗೆ ವಿಶೇಷ ಘಟಕ ಯೋಜನೆಯ ಲೆಕ್ಕಶೀರ್ಷಿಕೆ: 2205-00-102-1-44-422 ರಡಿ ರೂ.50.00 ಲಕ್ಷ ಹಾಗೂ ಗಿರಿಜನ ಉಪಯೋಜನೆಯಡಿಯ ಲೆಕ್ಕ ಶೀರ್ಷಿಕೆ: 2205-00-796-0-01-423 ರಡಿ ರೂ.25.00 ಲಕ್ಷಗಳ ಅನುದಾನ ಬಿಡುಗಡೆಗೆ ಅವಕಾಶ ಮಾಡಿಕೊಳ್ಳಲಾಗಿದೆ. ಸದರಿ ಅನುದಾನದಲ್ಲಿ ಕಲಾವಿದರ ಸಮೀಕ್ಷೆ ಕಾರ್ಯಕ್ಕೆ ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ಇವರಿಗೆ ಖಜಾನೆ-2ರ ಮೂಲಕ ಅನುದಾನದ ಬಿಲ್ಲಿನ ಮೇಲೆ ಭರಿಸಲು ಈ ಮುಂದಿನಂತೆ ಆದೇಶ.

**ಆದೇಶ:**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದಂತೆ, 2019-20ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳಲ್ಲಿರುವ ಕಲಾವಿದರ ಸಮೀಕ್ಷೆ ನಡೆಸಲು ವಿಶೇಷ ಘಟಕ ಯೋಜನೆಯ **ಲೆಕ್ಕ ಶೀರ್ಷಿಕೆ:2205-00-102-1-44-422** ರಡಿ **ರೂ.50,00,000/- (ರೂಪಾಯಿ ಐವತ್ತು ಲಕ್ಷ ಮಾತ್ರ)**ಗಳನ್ನು ಹಾಗೂ ಗಿರಿಜನ ಉಪಯೋಜನೆಯಡಿ **ಲೆಕ್ಕ ಶೀರ್ಷಿಕೆ:2205-00-796-0-01-423** ರಡಿ **ರೂ.25,00,000/-(ರೂಪಾಯಿ ಇಪ್ಪತ್ತೈದು ಲಕ್ಷ ಮಾತ್ರ)** ಲಕ್ಷಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ಇವರಿಗೆ ಅನುದಾನದ ಬಿಲ್ಲಿನ ಮೇಲೆ ಖಜಾನೆ-2ರ ಮೂಲಕ ಅನುದಾನ ಬಿಡುಗಡೆ ಮಾಡಲು ಆದೇಶಿಸಿದೆ.

**ಷರತ್ತುಗಳು:**

01. ಯಾವ ಉದ್ದೇಶಕ್ಕಾಗಿ ಹಣ ಮಂಜೂರು ಮಾಡಲಾಗಿದೆಯೇ ಅದೇ ಉದ್ದೇಶಕ್ಕೆ ಬಳಸತಕ್ಕದ್ದು.
02. ಈ ಯೋಜನೆಯನ್ನು ನಿಗಧಿತ ಕಾಲಾವಧಿಯೊಳಗೆ ಮುಗಿಸ ತಕ್ಕದ್ದು, (ಮಾರ್ಚ್-2020)
03. ಸಮೀಕ್ಷೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸೂಕ್ತ ಯೋಜನೆಯೊಂದನ್ನು ರೂಪಿಸಿಕೊಂಡು ಕಾರ್ಯನಿರ್ವಹಿಸುವುದು.

-2...

ಕರ್ನಾಟಕ ಜಾನಪದ ಅಕಾಡೆಮಿ
ಕ್ರಮ ಸಂಖ್ಯೆ 307
ದಿನಾಂಕ 21/08/2019
ಬೆಂಗಳೂರು

04. ಕರ್ನಾಟಕ ಪಾರದರ್ಶಕ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

05. ಸಂಪಾದಕ ಮಂಡಳಿ ಮತ್ತು ಇತರರಿಗೆ ನಿಗದಿಪಡಿಸಲಾದ ಇತರೆ ವೆಚ್ಚಗಳನ್ನು ನಿಯಮಾನುಸಾರ ಪಾವತಿಸುವುದು.

06. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಪರಿಶಿಷ್ಟ ಜಾತಿ/ಪಂಗಡದ ಸಮುದಾಯದವರನ್ನೇ ಕಡ್ಡಾಯವಾಗಿ ನೇಮಿಸಿಕೊಳ್ಳುವುದು. (ಲೇಖಕರನ್ನು ಒಳಗೊಂಡಂತೆ)

ಈ ವೆಚ್ಚವನ್ನು 2019-20ನೇ ಸಾಲಿನ ವಿಶೇಷ ಘಟಕ ಯೋಜನೆಯ ಲೆಕ್ಕ ಶೀರ್ಷಿಕೆ-2205-00-102-1-44-422ರಡಿ ಮತ್ತು ಗಿರಿಜನ ಉಪಯೋಜನೆಯ ಲೆಕ್ಕಶೀರ್ಷಿಕೆ-2205-00-796-0-01-423 ರಡಿ ಭರಿಸತಕ್ಕದ್ದು. ಈ ಆದೇಶವನ್ನು ಉಲ್ಲೇಖ(3)ರ ಸರ್ಕಾರಿ ಆದೇಶದಲ್ಲಿ ಮಾನ್ಯ ಇಲಾಖಾ ನಿರ್ದೇಶಕರಿಗೆ ಪ್ರದತ್ತವಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ನಿರ್ದೇಶಕರಿಂದ ಕರಡು ಅನುಮೋದನೆಗೊಂಡಿದೆ.

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು.

ಪ್ರತಿ:

1. ಸರ್ಕಾರದ ಕಾರ್ಯದರ್ಶಿಗಳು ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ ವಿಕಾಸ ಸೌಧ ಬೆಂಗಳೂರು ಇವರ ಅವಗಾಹನೆಗಾಗಿ.
2. ಜಂಟಿ ನಿರ್ದೇಶಕರು (ಆ) (ಕಾ) (ಸಾ) (ಸು.ಕ) ಕೇಂದ್ರ ಕಚೇರಿ ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಲೆಕ್ಕಪತ್ರ ಅಧಿಕಾರಿಗಳು, ಕೇಂದ್ರ ಕಚೇರಿ, ಬೆಂಗಳೂರು.
4. ಎಲ್ಲಾ ಜಿಲ್ಲೆಗಳ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರ ಅವಶ್ಯ ಕ್ರಮಕ್ಕಾಗಿ.
5. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳ ಅವಶ್ಯ ಕ್ರಮಕ್ಕಾಗಿ.
6. ವಿಷಯ ನಿರ್ವಾಹಕರು ಟಿ.ಎನ್.ಎಂ.ಸಿ ವಿಭಾಗ ಕೇಂದ್ರ ಕಚೇರಿ ಬೆಂಗಳೂರು. ಹಣ ಹಂಚಿಕೆ ಅಪ್ ಲೋಡ್ ಮಾಡಲು.
7. ಕಡತಕ್ಕೆ.